**OS-88/2018**
**PW-3**

**ದಿನಾಂಕಃ 22.08.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿ**ವಾದಿ ಪರ** ಶ್ರೀ ಬಿ ಎಮ್ ಎನ್ **ವಕೀಲರಿಂದಃ**

ನಾನು, ವಾದಿ ಮತ್ತು ಸಾಕ್ಷಿದಾರರಾದ ಕೃಷ್ಣೇಗೌಡರವರು ಒಂದೇ ಗ್ರಾಮದವರು ಮತ್ತು ಒಂದೇ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ವಾದಿಯು ಸಲ್ಲಿಸಿರುವ ದಾವಾ ಅನುಸೂಚಿ ಸ್ವತ್ತಿಗೆ ಸರ್ವೆ ನಂಬರ್ ಇರುವುದಿಲ್ಲ. ಸಾಕ್ಷಿದಾರರು ಮುಂದುವರೆದು, ಗ್ರಾಮಠಾಣಾ ಜಮೀನು ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತು ಅಂದಾಜು 22 ಗುಂಟೆ ವಿಸ್ತೀರ್ಣ ಇರುತ್ತದೆ. ವಾದಿಯು ಸದರಿ 22 ಗುಂಟೆಯ ಜಮೀನಿಗೆ ಮಾತ್ರ ಈ ದಾವೆ ಸಲ್ಲಿಸಿರುತ್ತಾರೆ. ಸದರಿ 22 ಗುಂಟೆ ಜಮೀನಿಗೆ ಚೆಕ್ಕು ಬಂದಿ ಪೂರ್ವಕ್ಕೆ ವಾದಿಯವರ ಜಮೀನು, ಪಶ್ಚಿಮಕ್ಕೆ ವಾದಿಯವರ ಜಮೀನು, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಕುಳ್ಳೇಗೌಡರವರ ಜಮೀನು ಬರುತ್ತದೆ. ಸದರಿ ಮೇಲೆ ತಿಳಿಸಿದ ಚೆಕ್ಕು ಬಂದಿಯೊಳಗಿನ ಆಸ್ತಿಗೆ ಸಂಬಂಧಿಸಿದಂತೆ 2-3 ವರ್ಷದ ಹಿಂದೆ ಕ್ರಯ ಪತ್ರವನ್ನು ನೋಡಿರುತ್ತೇನೆ. ಸದರಿ ಕ್ರಯ ಪತ್ರದ ಮೂಲಕ ಮಾದೇಗೌಡರವರು ಆಸ್ತಿಯನ್ನು ಖರೀದಿಸಿರುತ್ತಾರೆ. ದಾವಾ ಅನುಸೂಚಿ ಸ್ವತ್ತಿಗೆ ಪಹಣಿ ಪತ್ರಿಕೆ ಇರುವುದಿಲ್ಲ.

ಜಗಜೀವನ ಗ್ರಾಮದಿಂದ ನಮ್ಮ ಕಗ್ಗಲೀ ಪುರ ಗ್ರಾಮಕ್ಕೆ 1 ½ ಕಿ ಮೀ ದೂರವಾಗುತ್ತದೆ. ದಾವಾ ಅನುಸೂಚಿ ಸ್ವತ್ತು ತಮ್ಮಡೀಪುರ ಗ್ರಾಮದಲ್ಲಿ ಬರುತ್ತದೆ. ದಾವಾ ಅನುಸೂಚಿ ಸ್ವತ್ತನ್ನು ಜಗಜೀವನ ಗ್ರಾಮದ ಮಾದಿಗ ಜನಾಂಗಕ್ಕೆ ಸ್ಮಶಾನದ ಉದ್ದೇಶಕ್ಕಾಗಿ ಸರ್ಕಾರದವರು ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನಲ್ಲಿ ಜಗಜೀವನ ಗ್ರಾಮದ ಗ್ರಾಮಸ್ಥರು ಹೆಣಗಳನ್ನು ಊಳುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಸರ್ಕಾರದ ವತಿಯಿಂದ ಏನು ಆದೇಶ ಆಗಿದೆ ಎಂದು ನಾನು ಓದಿ ತಿಳಿದುಕೊಂಡಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತಿನಲ್ಲಿ ವಾದಿಯವರಿಗೆ ಯಾವುದೇ ಹಕ್ಕು ಹಿತಾಸಕ್ತಿ ಅಥವಾ ಸ್ವಾಧೀನತೆ ಇಲ್ಲದೇ ಇದ್ದರೂ ಸಹ ವಾದಿಯ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರದ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**1** ರಿಂದ **3** ನೇ ಪ್ರತಿವಾದಿಗಳ ಪರ ವಕೀಲರು ಈ ಮೇಲ್ಕಂಡ ಪಾಟೀ ಸವಾಲನ್ನು ಯಥಾವತ್ತಾಗಿ ಅಳವಡಿಸಿಕೊಳ್ಳುತ್ತಾರೆ.

<u>ಮರುವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ